ಅದಕ್ಕೆ ಎಲ್ಲ ವಿವರಣೆಗಳನ್ನು ಕೊಡುತ್ತೇನೆ. ಎಲ್ಲ ಪ್ರಶ್ನೆಗಳನ್ನು ಒಟ್ಟಿಗೆ ತೆಗೆದುಕೊಂಡರೆ ಉತ್ತರ ವನ್ನು ಕೊಡಲಿಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಬಿ. ಆರ್. ಪಾಟೀಲ್.—ಇಷ್ಟೊಂದು ದುಡ್ಡನ್ನು ಈ ವರ್ಷದಲ್ಲಿ ಖರ್ಚು ಮಾಡಬೇಕಾಗು ತ್ತದೆಂದು ಮಾನ್ಯ ಮಂತ್ರಿಗಳು ಹೇಳಿದರು. ಬರೇ ದುಡ್ಡನ್ನು ಖರ್ಚು ಮಾಡುವುದೇ ಅಲ್ಲ, ಯೋಜನೆ ಗಳ ಕೆಲಸ ಎಷ್ಟರಮಟ್ಟಿಗೆ ಆಗಿರುತ್ತದೆ ಎಂಬುದನ್ನು ಸಹ ಮಾನ್ಯ ಸಚಿವರು ಹೇಳಿದರೆ ಒಳ್ಳೆಯದು. ಏತಕ್ಕೆಂದರೆ ಅಲ್ಲಿಗೆ ಈಗ ಕೊಡುತ್ತಿರುವ ದುಡ್ಡೆಲ್ಲ ಬರೇ ಕಂಟ್ರಾಕ್ಟರ್ಸ್ ಮತ್ತು ಇಂಜಿನೀಯರ್ಸ್‌ಗಾಗಿ ಪೋಲಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಏನಾದರೂ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಡಿ ದೇವೇಗೌಡ.—ಈಗಾಗಲೇ ಇದರ ಬಗ್ಗೆ ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದೇನೆ. ಮತ್ತೆ ವಿವರಣೆ ಕೊಡಬೇಕೆಂದರೆ ಈ ವರ್ಷ 40 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡ ಬೇಕೆಂದಿರುವುದರಲ್ಲಿ 5.50 ಕೋಟಿ ರೂಪಾಯಿಗಳನ್ನು ಮಾತ್ರ ಇದಕ್ಕಾಗಿ ಖರ್ಚು ಮಾಡಿರುವುದಾಗಿರು ತ್ತದೆ ಬರೇ ಹಣವನ್ನು ಖರ್ಚು ಮಾಡುವುದರಿಂದ ಏನೂ ಆಗುವುದಿಲ್ಲ. ಕೆಲಸ ಆಗಬೇಕಲ್ಲ, ಈ ವರ್ಷ ಒಂದು ಲಕ್ಷ ಎಕರೆಗೆ ಜೂನ್ ಒಳಗೆ ನೀರು ಕೊಡುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳ ಬೇಕೋ ಅದನ್ನು ತೆಗೆದುಕೊಳ್ಳುತಕ್ಕಂಥ ಕೆಲಸ ಮಾಡುತ್ತಿದ್ದೇವೆ.

ಶ್ರೀ ಎಂ ವೀರಪ್ಪ ಮೊಯಿಲಿ.— ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಯ ಮೇಲೆ ನಾನು ಸ್ಪಷ್ಟೀ ಕರಣ ಕೇಳಲಿಕ್ಕೆ ಇಚ್ಛಿಸುತ್ತೇನೆ. ಈ ವರ್ಷ 1983-84ಕ್ಕೆ ಯು. ಕೆ. ಪಿ. ಇಷ್ಟೊಂದು ಹಣವನ್ನು ಒದಗಿಸಿದ್ದರೂ ಕೆಲಸ ಆಗಿಲ್ಲ. ಇನ್ನು ಇದಕ್ಕೆ ಆಗಬೇಕಾದ ಖರ್ಚು ಎಷ್ಟು ? ಕಂಟ್ರಾಕ್ಟರ್ಸ್‌ಗೆ ಆರಿ ಯರ್ಸ್ ಕೊಡಲು ಒಟ್ಟು ಆದಂಥ ಖರ್ಚು ಎಷ್ಟು ಎಂಬುದಕ್ಕೆ ಅಂಕಿ ಅಂಶಗಳನ್ನು ಪ್ರತ್ಯೇಕವಾಗಿ ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಕಂಟ್ರಾಕ್ಟರ್ಸ್‌ಗೆ ಪ್ರತ್ಯೇಕವಾಗಿ ಏನು ಹಣವನ್ನು ಕೊಟ್ಟಿಲ್ಲ. ಇದು ಏನಿದ್ದರೂ ವರ್ಕರ್ಸ್‌ಗೆ ಪೆಮೆಂಟ್ ಮಾಡಿರತಕ್ಕಂಥದ್ದಾಗಿರುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಅಲಮಟ್ಟಿ ಯೋಜನೆಯಿಂದ ಮುಳುಗಡೆಯಾಗತಕ್ಕಂಥ ಪ್ರದೇಶ ವೆಷ್ಟು ? ಇದರಲ್ಲಿ ಬಾಗಲಕೋಟೆಯ ಪ್ರದೇಶವು ಮುಳುಗಡೆಯಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ — ಬಾಗಲಕೋಟೆ ಫಸ್ಟ್ ಸ್ಟೇಜ್ ಈಗ ಮುಳುಗಡೆಯಾಗಿದೆ. ಇನ್ನೂ ಹೆಚ್ಚಿಗೆ ಪ್ರದೇಶವನ್ನು ನೀರಾವರಿ ಮಾಡಿದರೆ 30 ಅಡಿ ಫ್ಲಡ್ ವಾಟರ್ ಬರುತ್ತದೆಂದು ಆಂಟಿ ಸಿಪೇಟ್ ಮಾಡಿ we have thought over to shift Bagalkot because during heavy floods, portion of Bagalkot will be affected.

ವಿಷಯ : ದರ್ಕಾಸ್ತು ಜಮೀನಿನಲ್ಲಿ ಮರಗಳನ್ನು ಕಡಿಯುವುದು

ಪ್ರಶ್ನೆ : 167(376) ಶ್ರೀ ಬಾಕೀಲಹುಕ್ರಪ್ಪ (ಸೂಳ್ಯ).— ಮಾನ್ಯ ರಾಜ್ಯ ಅರಣ್ಯ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಸೂಳ್ಯ ತಾಲೂಕಿನಲ್ಲಿ ಹಲವಾರು ಕುಟುಂಬಗಳಿಗೆ ದರಖಾಸ್ತು ಜಮೀನು ಈ ಹಿಂದೆ ಮಂಜೂರು ಆಗಿ ಸುಮಾರು ಹತ್ತು ವರ್ಷಗಳಾದರೂ, ಆ ಸ್ಥಳಗಳಲ್ಲಿ ಮರಗಳನ್ನು ಅರಣ್ಯ ಇಲಾಖೆ ಯವರು ಕಡಿದು ಡಿಪೋಗೆ ಸಾಗಿಸದಿರಲು ಕಾರಣವೇನು ?

ಉತ್ತರ : ಶ್ರೀ ಜೀವಿಜಯ (ರಾಜ್ಯ ಅರಣ್ಯ ಮಂತ್ರಿಗಳು).— ಕಾರಣಗಳು :

1) ಕೆಲವು ಪ್ರಕರಣಗಳಲ್ಲಿ ವಲಯ ಅರಣ್ಯಾಧಿಕಾರಿಗಳು ದರಖಾಸ್ತುದಾರರಿಗೆ ತಮ್ಮ ಜಾಗ ವನ್ನು ತೋರಿಸಲು ನೋಟೀಸು ಕೊಟ್ಟಿದ್ದಾಗ್ಯೂ, ಅವರು ಜಾಗವನ್ನು ತೋರಿಸಿರುವುದಿಲ್ಲ.

2) ದರಖಾಸ್ತು ಜಮೀನುಗಳು ಚದರಿದ ಪ್ರದೇಶಗಳಲ್ಲಿ ಹಂಚಿಹೋಗಿವೆ ಮತ್ತು ಇದರಲ್ಲಿ ಲಭ್ಯವಿರುವ ಮರಗಳ ಪ್ರಮಾಣ ಅತಿ ಕಡಿಮೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ವಿಷಯ : ಕಲ್ಲೊಡ್ಡು ಯೋಜನೆ

ಪ್ರಶ್ನೆ : 168(470) ಶ್ರೀ ಬಿ. ಜಿ. ಬಣಕಾರ್ (ಹಿರೇಕೇರೂರು). — ಮಾನ್ಯ ಲೋಕೋಪ ಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕಲ್ಲೊಡ್ಡು ಯೋಜನೆಯಿಂದ ನೀರಾವರಿಯಾಗುವ ಕ್ಷೇತ್ರದ ವಿಸ್ತೀರ್ಣವೆಷ್ಟು ;

ಆ) ಕಲ್ಲೊಡ್ಡು ಯೋಜನೆಯ ಅಂದಾಜು ವೆಚ್ಚವೆಷ್ಟು ;

ಇ) ಕಲ್ಲೊಡ್ಡು ಯೋಜನೆಗೆ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು ;

ಈ) ಕಲ್ಲೊಡ್ಡು ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಅಲ್ಲಿಯ ಜನರು ಎಷ್ಟು ಎಕರೆ

ಅರಣ್ಯವನ್ನು ಕಡಿದು ಸಾಗುವಳಿ ಮಾಡಿದ್ದಾರೆ ?

ಉತ್ತರ: **ಶ್ರೀ ಹೆಚ್. ಡಿ. ದೇವೇಗೌಡ**(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) —

ಅ) 1,450 ಹೆಕ್ಟೇರುಗಳು ಆ) ರೂ. 484.80 ಲಕ್ಷ (1981-82) ಶೆಡ್ಯೂಲ್ ದರದಂತೆ)

ಇ) ರೂ. 17.81 ಲಕ್ಷ. ಈ) 99 ಎಕರೆಗಳು

ಮಾನ್ಯ ಸದಸ್ಯರು ಹಾಜರಿರಲಿಲ್ಲ

ವಿಷಯ : ಸರಕಾರಿ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ನಿವಾಸಿಗಳ ಕುಂದು ಕೊರತೆಗಳು

ಪ್ರಶ್ನೆ : 324 ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಜೀವನ ಭೀಮನಗರ, ತಿಮ್ಮೇನಹಳ್ಳಿ, ವಸಂತನಗರ ಮುಂತಾದ ವಸತಿ ಗೃಹಗಳಿಗೆ ಕಲ್ಪಿಸಲಾಗಿರುವ ಎಲ್ಲಾ ಸೌಲಭ್ಯಗಳನ್ನು ರಾಜಾಜಿನಗರ ಮತ್ತು ಹೊಂಬೇಗೌಡನಗರ ವಸತಿ ಗೃಹಗಳಿಗೆ ಕಲ್ಪಿಸುವುದಕ್ಕಾಗಿ ಮಾನ್ಯ ಲೋಕೋಪಯೋಗಿ ಸಚಿವರು ಕಳೆದ ವಿಧಾನ ಸಭೆಯಲ್ಲಿ ಭರವಸೆ ನೀಡಿರುವುದು ನಿಜವೇ ;

ಆ) ಹಾಗಿದ್ದಲ್ಲಿ ಈ ಸೌಲಭ್ಯಗಳನ್ನು ಇದುವರೆವಿಗೂ ಕಲ್ಪಿಸದಿರಲು ಕಾರಣಗಳೇನು ;

ಇ) ಜೀವನ ಭೀಮನಗರದಲ್ಲಿನ ಎಲ್ಲಾ ಸೌಲಭ್ಯಗಳನ್ನೂ ರಾಜಾಜಿನಗರದ ವಸತಿ ಗೃಹಗಳಿಗೆ ಎಷ್ಟು ಸಮಯದೊಳಗೆ ಕಲ್ಪಿಸಲಾಗುತ್ತದೆ

ಈ) ರಾಜಾಜಿನಗರದ ವಸತಿ ಗೃಹದ ನಿವಾಸಿಗಳ ಬೇಡಿಕೆಯಂತೆ ಇತ್ತೀಚೆಗೆ ಮಂಜೂರಾದ ಸೌಲಭ್ಯಗಳ ಕಾರ್ಯಗಳನ್ನು ಪ್ರಾರಂಭಿಸದಿರಲು ಕಾರಣಗಳೇನು ?

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು):— ಅ) ಜೀವನ ಭೀಮನಗರ, ತಿಮ್ಮೇನಹಳ್ಳಿ, ವಸಂತನಗರ ಮುಂತಾದ ವಸತಿಗಳಿಗೆ ಕಲ್ಪಿಸಲಾಗಿರುವ ಎಲ್ಲಾ ಸೌಲಭ್ಯಗಳನ್ನು ವಿದ್ಯುಚ್ಛಕ್ತಿಯಿಂದ ಅಡಿಗೆ ಮಾಡುವ ಸೌಲಭ್ಯ ಹೊರತು ರಾಜಾಜಿನಗರ ಮತ್ತು ಹೊಂಬೇಗೌಡನಗರ ವಸತಿ ಗೃಹಗಳಿಗೆ ಒದಗಿಸಲಾಗಿದೆ. ಈ ವಿದ್ಯುಚ್ಛಕ್ತಿ ಅಡಿಗೆ ಮಾಡುವ ಸೌಲಭ್ಯವನ್ನು ಒದಗಿಸುವ ಕಾರ್ಯವನ್ನು ಹಂತಹಂತವಾಗಿ ಅನುದಾನದ ಮೇಲೆ ತೆಗೆದು ಕೊಳ್ಳಲಾಗುವುದು

ಆ) ಮೇಲಿನ ಉತ್ತರ ಇದಕ್ಕೆ ಸರಿಹೊಂದುತ್ತದೆ.

ಇ) ವಿದ್ಯುಚ್ಛಕ್ತಿ ಅಡಿಗೆ ಮಾಡುವ ಸೌಲಭ್ಯವನ್ನು ಒದಗಿಸುವ ಕಾರ್ಯವನ್ನು ಹಂತಹಂತವಾಗಿ ಅನುದಾನದ ಮೇಲೆ ತೆಗೆದುಕೊಳ್ಳಲಾಗುವುದು.

ಈ) ಮಂಜೂರಾದ ಸೌಲಭ್ಯಗಳ ಕಾರ್ಯಗಳೆಲ್ಲವನ್ನು ಪ್ರಾರಂಭಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್ —ರಾಜಾಜಿನಗರ ಮತ್ತು ಹೊಂಬೇಗೌಡನಗರದ ವಸತಿ ಗೃಹಗಳವರು ಕೇಳಿರುವ ಎಲ್ಲ ಸೌಲಭ್ಯಗಳನ್ನು ಒದಗಿಸಿ ಕೊಡುತ್ತೇವೆಂದು ಹೇಳಿ ಸರ್ಕಾರದವರು ಭರವಸೆಯನ್ನು ಕೊಟ್ಟಿದ್ದರು. ಜೀವನ ಭೀಮಾನಗರದಲ್ಲಿ ಏನು ವಸತಿ ಸೌಕರ್ಯ ಕಲ್ಪಿಸಿಕೊಟ್ಟಿದ್ದೀರಿ, ಅದರಂತೆ ಇಲ್ಲೂ ಕಲ್ಪಿಸಿಕೊಡಲು ಒಂದು ಪಟ್ಟಿಯನ್ನೇ ಕೊಟ್ಟಿದ್ದರು. ಈಗ ಅವರಿಗೆ ಈ ಸೌಲಭ್ಯಗಳನ್ನು ಕೊಟ್ಟಿರುವ ಬಗ್ಗೆಯೂ ಹೇಳಲಿಲ್ಲ, ಕೊಡದಿರುವ ಬಗ್ಗೆಯೂ ಮಾನ್ಯ ಸಚಿವರು ಹೇಳಲಿಲ್ಲ. ಇದು ಏಕೆ ಹೀಗಾಯಿತು ಗೊತ್ತಾಗಲಿಲ್ಲ. ಎಲ್ಲ ಸೌಲಭ್ಯಗಳು ಇದೆ ಒಂದು ಮಾತ್ರ ಇಲ್ಲವೆಂದು ತಾವು ಹೇಳಿದ್ದೀರಿ; ಅದು ವಿದ್ಯುಚ್ಛಕ್ತಿಯಿಂದ ಅಡುಗೆ ಮಾಡುವ ಸೌಲಭ್ಯವೆಂದು ಹೇಳುತ್ತೀರಿ. ಜೀವನ ಭೀಮಾನಗರದಲ್ಲಿ ಎರಡು ದೊಡ್ಡ ಹಾಲ್, ಅಡಿಗೆ ಮನೆ, ಶವರ್ ಬಾತ್‌ರೂಂ ಇದೆಲ್ಲಾ ಇದೆ. ರಾಜಾಜಿನಗರದಲ್ಲಿ ಒಂದೇ ಒಂದು ಸಣ್ಣ ಕೊಠಡಿ, ಸಣ್ಣ ಹಾಲ್, ಸಣ್ಣ ಪ್ರಮಾಣದ ಬಚ್ಚಲು ಮನೆ ಇದೆ. ಜೀವನ ಭೀಮಾನಗರದಲ್ಲಿ ಕರೆಂಟ್‌ನಿಂದ ನೀರು ಕಾಯಿಸುವ ವ್ಯವಸ್ಥೆ ಇದೆ, ಟ್ಯೂಬ್‌ಲೈಟ್, ಫ್ಯಾನ್, ಕಾರ್ ಶೆಡ್ ಎಲ್ಲ ವ್ಯವಸ್ಥೆ ಇದೆ. ಅದೇ ರಾಜಾಜಿನಗರದಲ್ಲಿ ಈ ಯಾವ ಅನುಕೂಲ ಕೂಡ ಇಲ್ಲ. ಜೀವನ ಭೀಮಾನಗರದಲ್ಲಿ ಆಯಾ ಮನೆಗಳವರೇ ನೀರು ಪೂರೈಸಿಕೊಳ್ಳುವುದಕ್ಕೆ ಪ್ರತ್ಯೇಕವಾದ ಮೀಟರ್ ವ್ಯವಸ್ಥೆ ಇರುತ್ತದೆ. ರಾಜಾಜಿನಗರದಲ್ಲಿ ಈ ರೀತಿಯಾದ ಸೌಲಭ್ಯವಿರುವುದಿಲ್ಲ. ಜೀವನ ಭೀಮಾನಗರದ ಕ್ವಾರ್ಟರ್ಸ್‌ಗೆ ಪ್ರತಿ ಡಿಸೆಂಬರ್ ತಿಂಗಳಲ್ಲಿ ಡಿಸ್ಟೆಂಪರ್ ಹೊಡೆಸಿಕೊಡುವಂಥ ವ್ಯವಸ್ಥೆ ಇರುತ್ತದೆ. ಅದೇ ರಾಜಾಜಿನಗರದಲ್ಲಿ ಈ ಸೌಲಭ್ಯವಿಲ್ಲ. ಸುಣ್ಣವನ್ನು ಅವರವರೇ ಬಳಸಿಕೊಳ್ಳಬೇಕಾಗಿರುತ್ತದೆ. ಇದೆಲ್ಲ ವ್ಯತ್ಯಾಸಗಳು ಇರುತ್ತವೆ. ಇದಕ್ಕೆ ತಮ್ಮ ಉತ್ತರವೇನೆಂದು ಕೇಳುತ್ತೇನೆ ?

ಶ್ರೀ ಹೆಚ್. ಡಿ ದೇವೇಗೌಡ.—ಮಾನ್ಯ ಸದಸ್ಯರು ಹೇಳಿದಂಥ ಕೆಲವು ಸಮಸ್ಯೆಗಳು ಇರತಕ್ಕಂಥದ್ದು ನಿಜ ಕೆಲವು ಕಡೆಗಳಲ್ಲಿ ಕಾರನ್ನು ನಿಲ್ಲಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದರೆ ಕಷ್ಟವಾಗುತ್ತದೆ. ಮನೆ ಮುಂದೆ ನಿಲ್ಲಿಸಿಕೊಳ್ಳಬೇಕು. ಇನ್ನೂ ಅನೇಕ ಸಮಸ್ಯೆಗಳನ್ನು ಹೇಳಿದ್ದಾರೆ. ಸಣ್ಣ ಸಣ್ಣ ಬದಲಾವಣೆ ಮಾಡಬೇಕೆಂದು ಹೇಳಿರುತ್ತಾರೆ. ಎಲ್ಲವನ್ನು ಬದಲಾವಣೆ ಮಾಡಬೇಕೆಂದರೆ ತೊಂದರೆಯಾಗು